ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 115/2024

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ-02

ಸಾಕ್ಷಿದಾರನ ಹೆಸರು :- ಅರುಣಕುಮಾರ್ ಜೆ.ಎಸ್
ತಂದೆಯ ಹೆಸರು :- ಶಂಕರೇಗೌಡ
ವಯಸ್ಸು :- 35 ವರ್ಷ
ಉದ್ಯೋಗ :- ಗ್ರಾಮ ಲೆಕ್ಕಾಧಿಕಾರಿ
ವಾಸ :- ಜವರನಹಳ್ಳಿ, ಬೆಳ್ಳೂರು ಹೋ.

**ಸಾಕ್ಷಿಗೆ ದಿಃ 12.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 17.10.2023 ಸಂಜೆ 6 ಗಂಟೆಯ ಸಮಯದಲ್ಲಿ ಎಡಿಯಾರು ಉಪತಹಸಿಲ್ದಾರ ಅವರು ದೂರವಾಣಿಯ ಮೂಲಕ ಕರೆ ಮಾಡಿ ಎಡಿಯೂರು ನಿಂದ ಜಲದಗೇರೆ ಸಂಪರ್ಕ ಕಲ್ಪಿಸುವ ರಸ್ತೆಗೆ ಬರಲು ಹೇಳಿದ್ದು ಎಡಿಯೂರು ಬಸ್ ನಿಲ್ದಾಣದ ಬಳಿ ಅಮೃತೂರು ಪೋಲಿಸರು ಇದ್ದು ಅವರ ಪೈಕಿ ಚಾಸಾ 10 ಅವರು ತಮ್ಮನ್ನು ಪರಿಚಯ ಮಾಡಿಕೊಂಡು ನೋಟಿಸ್ ನೀಡಿರುತ್ತಾರೆ. ನಂತರ ಚಾಸಾ 1 ಅವರನ್ನು ಬೇಟಿ ಮಾಡಿಸಿರುತ್ತಾರೆ. ನಂತರ ಅನಧಿಕೃತವಾಗಿ ಗ್ಯಾಸ ರಿಫಿಲಿಂಗ್ ಮಾಡುವ ಸ್ಥಳದಲ್ಲಿ ದಾಳಿ ಮಾಡಬೇಕಾದ ವಿಚಾರ ತಿಳಿಸಿರುತ್ತಾರೆ. ನಂತರ ಜಲದಗೇರೆ 2 ನೇ ಕ್ರಾಸ್ ನಲ್ಲಿ ಸ್ವಲ್ಪ ದೂರದಲ್ಲಿ ಒಂದು ಪಾಳು ಬಿದ್ದ ಮನೆ ಇದ್ದು ಅಲ್ಲಿ ಹೋದ ಬಳಿಕ ಅಲ್ಲಿಯೇ ರೀ ಫಿಲಿಂಗ್ ಮಾಡುವ ಬಗ್ಗೆ ತಿಳಿಸಿರುತ್ತಾರೆ. ಮನೆಯ ಮುಖ್ಯ ದ್ವಾರದಲ್ಲಿ ಇಬ್ಬರೂ ಪೋಲಿಸ ಸಿಬ್ಬಂದಿಯನ್ನು ನಿಲ್ಲಿಸಿ ಇಬ್ಬರೂ ಕಿಡಕಿಯ ಬಳಿ ಬಂದು ನೋಡಿದಾಗ ಸದರಿ ಕಟ್ಟಡದಲ್ಲಿ ಆರೋಪಿ ಲಕ್ಷ್ಮಕಾಂತ ಅವರು ಇದ್ದು ಆಗ ಅವರು ಪೋಲಿಸರನ್ನು ನೋಡಿ ಕಟ್ಟಡದಿಂದ ಹೊರಗೆ ಬರಲು ಪ್ರಯತ್ನಿಸಿದಾಗ ಅಲ್ಲೇ ಇದ್ದ ಪೋಲಿಸ ಸಿಬ್ಬಂದಿಗಳು ಆತನನ್ನು

ತಡೆದಿದ್ದಾರೆ. ನಂತರ ಕಟ್ಟಡದಲ್ಲಿ ಮಂದ ಬೆಳಕು ಇದ್ದ ಕಾರಣ ಮೊಬೈಲ್ ಟಾರ್ಚ್ ಅನ್ನು ಆನ್ ಮಾಡಿಕೊಂಡು ಒಳಗಡೆ ಹೋಗಲಾಗಿ ಅಲ್ಲಿ ಕೇಲವು ಸಿಲಿಂಡರ್ ಗಳು ಇದ್ದು ಅವುಗಳಲ್ಲಿ ಹೆಚ್.ಪಿ ಕಂಪನಿಯ 4 ಖಾಲಿ ಸಿಲಿಂಡರಗಳು ಇದ್ದವು ಮತ್ತು ಹೆಚ್.ಪಿ ಕಂಪನಿಯ ತುಂಬಿದ ಸಿಲಿಂಡರ್, ಭಾರತ ಗ್ಯಾಸ ಕಂಪನಿಯ 6 ಖಾಲಿ ಮತ್ತು ಒಂದ ಅರ್ಧ ತುಂಬಿದ ಸಿಲಿಂಡರ, ಹೆಚ್.ಪಿ ಕಂಪನಿಯ 8 ಕಮರ್ಷಿಯಲ್ ಗ್ಯಾಸ ಸಿಲಿಂಡರಗಳು ಒಂದು ಅರ್ಧ ತುಂಬಿದ ಕಮರ್ಷಿಯ ಸಿಲಿಂಡರ ಇದ್ದು ಗ್ಯಾಸ ರೀ ಪಿಲಿಂಗ್ ಗೆ ಬಳಸುವ 3 ರಾಡುಗಳು, 1 ಎಲೇಟ್ರಾನಿಲ್ ತೂಕಕ ಅಳತೆ ಪಟ್ಟಿ, 5 ಪ್ಲಾಸ್ಟಿಕನ ಲಾಕ ಕ್ಯಾಚಗಳು ಇದ್ದು, ಸದರಿ ಕಟ್ಟಡ ಮೇಲ್ಚಾವಣಿ ಹಂಚಿನಿಂದ ಇರುತ್ತದೆ. ನೆಲ ಮಣ್ಣಿನಲ್ಲಿ ಇದ್ದು, ಒಂದು ಪ್ರವೇಶ ದ್ವಾರ ಇದ್ದು ಕೆಲವು ಹೆಂಚುಗಳು ಹಾನಿಯಾಗಿ ಶೀಥಿಲಗೊಂಡಿರುತ್ತವೆ.

ನಂತರ ಆರೋಪಿಯನ್ನು ವಿಚಾರಿಸಲಾಗಿ ಸದರಿ ಕಟ್ಟಡ ನರಗೇಹಳ್ಳಿ ರಾಮಚಂದ್ರಯ್ಯ ಅವರಿಗೆ ಸೇರಿದ್ದು ಇರುತ್ತದೆ. ಆರೋಪಿ ಎಡಿಯೂರು ಗ್ರಾಮದವರು ಆಗಿದ್ದು ಅವರ ವಯಸ್ಸು 51 ಆಗಿರುತ್ತದೆ. ಸದರಿ ಕಟ್ಟಡವನ್ನು ಆರೋಪಿ ತಿಂಗಳಿಗೆ 2 ಸಾವಿರದಂತೆ ಬಾಡಿಗೆ ಪಡೆದಿದ್ದು ಯಾವುದೆ ಕಾಗದ ಪತ್ರ ಆಗಿರುವುದಿಲ್ಲ. ಸದರಿ ಕಟ್ಟಡ ಎದುರುಬದಿಯಲ್ಲಿ ಆರೋಪಿ ವಾಸ ಮಾಡುವ ಮನೆ ಇರುತ್ತದೆ. ಆರೋಪಿಯನ್ನು ವಿಚಾರಿಸಲಾಗಿ ಅವರು ಯಾವುದೆ ಪರವಾನಿಗೆಯನ್ನು ಪಡೆದಿರುವುದಿಲ್ಲ ಮತ್ತು ಸರಕ್ಷಿತ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಸದರಿ ಕಟ್ಟಡ ಎಡಬಾಗ ಮತ್ತು ಬಲಬಾಗ ಮತ್ತು ದಕ್ಷಿಣ ದಿಕ್ಕಿನಲ್ಲಿ ಜನ ವಸತಿ ಕಟ್ಟಡಗಳು ಇರುತ್ತವೆ.

ಆರೋಪಿ ಯಾವುದೇ ಮುಂಜಾಗ್ರತಾ ಕ್ರಮ ತಗೆದುಕೊಳ್ಳದೇ ಅನಧಿಕೃತವಾಗಿ ಗ್ಯಾಸ ರೀ ಫಿಲಿಂಗ್ ಮಾಡುತ್ತಿದ್ದರು. ನಂತರ ಆರೋಪಿಯನ್ನು ಮತ್ತು ಮು. ಮಾ. ಗಳನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ. ಚಾಸಾ 6 ಅವರು ದೂರನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತಾರೆ. ಮೊಬೈಲ್ ಪ್ರಿಂಟರ್ ಸಹಾಯದಿಂದ ಪ್ರಿಂಟ್ ತೆಗೆಯಲಾಗಿರುತ್ತದೆ. ಆ ಸಮಯದಲ್ಲಿ ನಾನು ಚಾಸಾ 3 ಪೋಲಿಸ ಸಿಬ್ಬಂದಿಗಳು ಸದರಿ ಪಂಚನಾಮೆಗೆ ಸಹಿ

ಮಾಡಿರುತ್ತಾರೆ. ಪಂಚನಾಮೆಯನ್ನು ಸಂಜೆ 6.30 ರಿಂದ 7.45 ರವರೆಗೆ ಮಾಡಿರುತ್ತಾರೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2(ಬಿ)ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮು.ಮಾ. ಗಳನ್ನು ಗುರುತಿಸುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಕ್ಷೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 3 ಎಂದು ಸಹಿ ನಿ.ಪಿ 3(ಎ) ಎಂದು ಗುರುತಿಸಲಾಯಿತು.

**ಆರೋಪಿತರ ಪರ ಪಾಟೀ ಸವಾಲುಃ ಟಿ.ಜಿ.ಟಿ. ವಕೀಲರಿಂದಃ**

ಎಡಿಯೂರಿನ ಉಪಕಚೇರಿಯನ್ನು ಬೆಳಿಗ್ಗೆ 10 ಗಂಟೆಗೆ ತೆರೆಯಲಾಗಿರುತ್ತದೆ. ನಮ್ಮ ಕಚೇರಿಯ ಕೆಲಸದ ಅವದಿ 5.30 ರವರೆಗೆ ಇರುತ್ತದೆ ಎಂದರೆ ಸರಿ. ನಿಮ್ಮ ಹಾಜರಾತಿಯನ್ನು ಎಲ್ಲಿ ಹಾಕುತ್ತಿರಾ ಎಂದರೆ ಸಾಕ್ಷಿ ನಮಗೆ ಹಾಜರಾತಿ ಇರುವುದಿಲ್ಲವೆಂದು ಹೇಳುತ್ತಾರೆ. ಉಪ ತಹಸಿಲ್ದಾರ ಅವರು ಉಪ ತಹಸಿಲ್ದಾರ ಕಚೇರಿ ಎಡಿಯೂರು ನಲ್ಲಿ ತಮ್ಮ ಹಾಜರಾತಿಯನ್ನು ಹಾಕುತ್ತಾರೆ. ಘಟನೆ ಆಯಿತು ಎನ್ನುವ ದಿನ ನಾನು ನನ್ನ ಕರ್ತವ್ಯವನ್ನು ದೊಡ್ಡಮಧೂರೆಯಲ್ಲಿ ನಿರ್ವಹಿಸುತ್ತಿದ್ದೇ. 5.30 ಗಂಟೆಗೆ ಎಲ್ಲಾ ಸಿಬ್ಬಂದಿಗಳು ಕೆಲಸ ಮುಗಿಸುತ್ತಾರೆ ಎಂದರೆ ಸರಿ.

ನನಗೆ ಕರೆ ಬಂದಾಗ ನಾನು ಜಲದಗೇರೆಯಲ್ಲಿದ್ದೆ. ನನಗೆ ಕರೆ ಬಂದಾಗ ಸುಮಾರು 6 ಗಂಟೆ ಆಗಿತ್ತು. ಚಾಸಾ 3 ಅವರು ತುವೆಕೆರೆ ಮತ್ತು ರಾಗಿಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ನನಗೆ ಚಾಸಾ 3 ಅವರು ಮತ್ತು ಚಾಸಾ 3 ಅವರಿಗೆ ನಾನು ಕರೆ ಮಾಡಿರುವುದಿಲ್ಲ. ಜಲದಗೆರೆಯಿಂದ ನಮ್ಮ ನಾಡ ಕಚೇರಿ 2 ವರೆ ಯಿಂದ 3 ಕೀ ಮೀಟರ್ ದೂರ ಆಗುತ್ತದೆ. ಕಚೇರಿಯಿಂದ ಹೊರಡಲು 5 ನಿಮಿಷ ತೆಗೆದುಕೊಂಡಿರುತ್ತೇನೆ. ನಮ್ಮ ಕಚೇರಿಯಿಂದ ನಾಡ ಕಚೇರಿಗೆ ಹೊರಡಲು 7 ರಿಂದ 8 ನಿಮಿಷ ಆಗುತ್ತದೆ. ಉಪ ತಹಸಿಲ್ದಾರ ಅವರು ನಮಗೆ ನೋಟಿಸ್ ನೀಡಿರುವುದಿಲ್ಲ. ನಮ್ಮ ಕಚೇರಿಯಿಂದ ಎಡಿಯೂರು ಬಸ್ ನಿಲ್ದಾಣ ಅರ್ಧ ಕೀ. ಮೀಟರ್ ದೂರ ಇರುತ್ತದೆ.

ನಮ್ಮ ಕಚೇರಿಯಿಂದ ತಕ್ಷಣವೇ ಹೊರಟಿರುತ್ತೇವೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ. ನಾವು ಎಡಿಯೂರು ಬಸ್ ನಿಲ್ದಾಣದ ಬಳಿ ಹೋದಾಗ 5-6 ಜನ ಪೋಲಿಸರು ಇದ್ದರು. ಸ್ಥಳದಲ್ಲಿ ಒಂದು ಪೋಲಿಸ್ ಜೀಪ್ ಇತ್ತು. ಚಾಸಾ 1 ಅವರನ್ನು ಹೊರತು ಪಡಿಸಿ ಅವರ ಮೇಲಾಧಿಕಾರಿ ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಡಿ.ವೈ.ಎಸ್.ಪಿ ಅವರು ಸ್ಥಳದಲ್ಲಿ ಇರಲಿಲ್ಲ. ಎಡಿಯೂರು ಬಸ್ ನಿಲ್ದಾಣದಿಂದ ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ.

ಸ್ಥಳಕ್ಕೆ ನಾವು ಹೋಗುವ ಮುನ್ನ ಬೇರೆ ಪೋಲಿಸರು ಹೋಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾಳಿ ನಮ್ಮ ಸಮಕ್ಷಮ ಆಗಿರುತ್ತದೆ. ಎಲ್ಲರೂ ಒಂದೇ ಜೀಪ್ ನಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿ ನಾನು ಗಮನಿಸಿರುವುದಿಲ್ಲವೆಂದು ಹೇಳುತ್ತಾರೆ. ನಾನು ಮತ್ತು ಚಾಸಾ 10 ನಡೆದುಕೊಂಡು ಹೋಗಿರುತ್ತೇವೆಂದು ಹೇಳುತ್ತಾರೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದು ಇರುವುದಿಲ್ಲವೆಂದರೆ ಸರಿ. ಸ್ಥಳದಲ್ಲಿ ಡಿ.ವೈ.ಎಸ್.ಪಿ ಅವರು ಇದ್ದ ಬಗ್ಗೆ ಮತ್ತು ಅವರು ಯಾರೆಂದು ನನಗೆ ಮಾಹಿತಿ ಇರುವುದಿಲ್ಲ. ಮಹಜರನಲ್ಲಿ ಡಿ.ವೈ.ಎಸ್.ಪಿ ಅವರು ಇದ್ದ ಬಗ್ಗೆ ಬರೆದಿದ್ದು ಈ ಬಗ್ಗೆ ನನಗೆ ನೆನಪಿರುವುದಿಲ್ಲ.

ನಾವು ಹೋದ ಸಮಯದಲ್ಲಿ ಸಾರ್ವಜನಿಕರು 8 ರಿಂದ 10 ಜನ ಸೇರಿದ್ದರು. ಪೋಲಿಸರು ನನ್ನ ಸಮಕ್ಷಮ ಕಿಡಕಿಯಲ್ಲಿ ನೋಡಿರುತ್ತಾರೆ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನಮೂದು ಇರುವುದಿಲ್ಲವೆಂದರೆ ಸರಿಯಲ್ಲ. ಸ್ಕೇಚ್ ನಲ್ಲಿ ಎಲ್ಲಿಯೂ ಸಹ ಕಿಡಕಿ ನಮೂದು ಇರುವುದಿಲ್ಲವೆಂದರೆ ಸರಿ. ಮಹಜರನ್ನು ಮನೆಯ ಒಳಗಡೆ ಮಾಡಿರುತ್ತಾರೆ. ಈ ವಿಚಾರವನ್ನು ನನ್ನ ಹೇಳಿಕೆ ಮತ್ತು ಪಂಚನಾಮೆಯಲ್ಲಿ ನಮೂದು ಇರುವುದಿಲ್ಲವೆಂದರೆ ಸರಿ. ಮಹಜರ ಸಮಯದಲ್ಲಿ ಪೋಲಿಸರು ತಗೆದಿರುತ್ತಾರೆ. ಕಟ್ಟಡದ ಒಳಗಡೆ ಸಿಲಿಂಡರಗಳನ್ನು ಜೊಡಿಸಿ ಇಟ್ಟಿದ್ದರು ಈ ವಿಚಾರ ಹೇಳಿಕೆಯಲ್ಲಿ ನಮೂದು ಇರುವುದಿಲ್ಲ. ಎಷ್ಟು ಜನ ಸಾರ್ವಜನಿಕ ಸಹಿ ಪಡೆದಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ.

ಈ ವಿಚಾರವಾಗಿ ನಾನು ಬೇರೆ ದಿನ ಠಾಣೆಗೆ ಹೋಗಿರುವುದಿಲ್ಲ. ಸ್ಥಳದಲ್ಲಿ ಮಹಜರನ್ನು ಹೊರತು ಪಡಿಸಿ ಬೇರೆ ಏನು ಮಾಡಿರುವುದಿಲ್ಲ. ನನ್ನ ಹೇಳಿಕೆಯನ್ನು ಸಹ ಅಲ್ಲಿಯೇ ಟೈಪ್ ಮಾಡಿರುತ್ತಾರೆ. ಹೇಳಿಕೆಗೆ ನಿಮ್ಮ ಸಹಿ ಇರುವುದಿಲ್ಲ ಸದರಿ ಹೇಳಿಕೆ ನಾನು ಸಹಿ ಮಾಡಿದ ಹೇಳಿಕೆ ಆಗಿರುವುದಿಲ್ಲ. ಹೇಳಿಕೆಯಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಮನೆಯ ಉತ್ತರ ದಿಕ್ಕಿಗೆ ಖಾಲಿ ಇದ್ದು ಉಳಿದ ಎಲ್ಲಾ ಕಡೆ ಮನೆಗಳು ಇದ್ದವು. ದಕ್ಷಿಣ ದಿಕ್ಕಿಗೆ 15 ಅಡಿ ರಸ್ತೆ ಇತ್ತು. ಮನೆಗಳು ಒಂದಕ್ಕೊಂದು ಕೂಡಿರುತ್ತವೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಗಲ್ಲಿ ಇರುವ ಬಗ್ಗೆ ನಮೂದು ಇಲ್ಲವೆಂದರೆ ಸರಿ.

ಸ್ಥಳದಲ್ಲಿ ಟೈಪ್ ಮಾಡಿದ್ದನ್ನು ಹೊರತು ಪಡಿಸಿ ಕೈ ಬರವಣಿಗೆಯಲ್ಲಿ ಬರೆದ ಬಗ್ಗೆ ನನಗೆ ನೆನಪಿಲ್ಲ. ಸ್ಥಳದಲ್ಲಿ ಯಾವುದೇ ಗ್ಯಾಸ ರಿ ಫಿಲಿಂಗ್ ಮಾಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಮು. ಮಾ. ಗಳನ್ನು ವಶಪಡಿಸಿಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಮು. ಮಾ. ಗಳನ್ನು ಈ ಕೇಸಗೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ಮಹಜರಗೆ ಸಹಿ ಮಾಡಿದ್ದು ಚಾಸಾ 1 ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ದಾಖಲಿಸಲು ಆಹಾರ ಮತ್ತು ಸರಬರಾಜು ಇಲಾಖೆಯವರಿಗೆ ಮತ್ತು ಪೋಲಿಸರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ನಕಾಶೆಯನ್ನು ತಯಾರು ಮಾಡಿಲ್ಲವೆಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.